8. ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಸ್ತುತ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ, ಆಯ್ಕೆಯಾದ 224 ಅಭ್ಯರ್ಥಿಗಳ ಪೈಕಿ ಇತ್ತೀಚೆಗೆ 210 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ.
9. ಇಲಾಖೆಯಲ್ಲಿ ಒಟ್ಟು 13965 ಗ್ರೂಪ್-ಡಿ ನೌಕರರ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 4067 ಹುದ್ದೆಗಳು ಖಾಲಿಯಿವೆ. ಸದರಿ ಖಾಲಿ ಹುದ್ದೆಗಳ ಪೈಕಿ 2323 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆಯು ಜಾರಿಯಲ್ಲಿದೆ.

ಮಹಿಳಾ ವೈದ್ಯರ ನೇಮಕಾತಿ
61 (378)
ಶ್ರೀ ಅಮರೇಶ (ಮುಳಬಾಗಿಲು)

ಅ) ಮುಳಬಾಗಿಲು ತಾಲ್ಲೂಕಿನ ಹೋಬಳಿಗಳಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಮಹಿಳಾ ವೈದ್ಯರ ನೇಮಕಾತಿಯನ್ನು ಎಷ್ಟು ಅವಧಿಯೊಳಗಾಗಿ ಪೂರ್ಣಗೊಳಿಸಲಾಗುವುದು.

ಇ) ಹೋಬಳಿ ಮಟ್ಟದ ಆಸ್ಪತ್ರೆಗಳಲ್ಲಿ ರಾತ್ರಿಯ ಸಮಯದಲ್ಲಿ ವೈದ್ಯರುಗಳು ಇರುವ ಹಾಗೆ ವ್ಯವಸ್ಥೆ ಮಾಡಲು ಸರ್ಕಾರವು ಕ್ರಮಕೈಗೊಳ್ಳುವುದೇ? (ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ
(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮತ್ತು ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ "ಮಹಿಳಾ ವೈದ್ಯಾಧಿಕಾರಿ" ಎಂಬ ವ್ಯಂದ ಅಸ್ತಿತ್ವದಲ್ಲಿರುವುದಿಲ್ಲ.

ಮುಳಬಾಗಿಲು ತಾಲ್ಲೂಕಿನಲ್ಲಿ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಈ ಆರೋಗ್ಯ ಕೇಂದ್ರಗಳಲ್ಲಿನ ಎಲ್ಲಾ 17 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಭರ್ತಿಯಾಗಿವೆ. ಕಾರ್ಯನಿರತ ವೈದ್ಯರ ಪೈಕಿ ಇಬ್ಬರು ಮಹಿಳಾ ವೈದ್ಯರು ಸೇರಿದ್ದಾರೆ.

ಇ) ಮೇಲ್ಕಂಡ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ, 10 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 24x7 ಕಾರ್ಯನಿರ್ವಹಿಸುವ ಕೇಂದ್ರಗಳಾಗಿದ್ದು, ಅವುಗಳಲ್ಲಿ ದಿನದ 24 ಗಂಟೆ ಹೆರಿಗೆ ಸೌಲಭ್ಯ ಲಭ್ಯವಿದೆ. ಈ ಪೈಕಿ ಹೋಬಳಿ ಮಟ್ಟದಲ್ಲಿ 04 ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಅಂದರೆ ತಾಯಿಲೂರು, ಬೈರಕೂರ್, ಅವನಿ ಮತ್ತು ನಂಗಳಿ) 24x7 ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ಸದರಿ ಕೇಂದ್ರಗಳಲ್ಲಿ 03 ಶುಶ್ರೂಷಕರು ಪಾಳಿಯ ಮೇಲೆ ದಿನದ 24 ಗಂಟೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವೈದ್ಯಾಧಿಕಾರಿಗಳು ರಾತ್ರಿಯ ವೇಳೆ ಕಾಲಡ್ಯೂಟಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ತಂಬಾಕು ಸೇವನೆಯಿಂದ ದುಷ್ಪರಿಣಾಮಗಳು

66 (241)

ಶ್ರೀ ರೋಷನ್ ಬೇಗ್. ಆರ್ (ಶಿವಾಜಿನಗರ)

1) ರಾಜ್ಯದಲ್ಲಿ ಗುಟ್ಕಾ ಸೇವನೆ ನಿಷೇಧ ಮಾಡಲಾಗಿದೆಯೇ;

2) ದೇಶದ ಎಷ್ಟು ರಾಜ್ಯಗಳಲ್ಲಿ ಗುಟ್ಕಾ ನಿಷೇಧ ಮಾಡಲಾಗಿದೆ; ರಾಜ್ಯದಲ್ಲಿ ಗುಟ್ಕಾ ನಿಷೇಧ ಮಾಡದಿರಲು ಕಾರಣವೇನು;

3) ರಾಜ್ಯದಲ್ಲಿ ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳನ್ನು ತಡೆಯುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಅರವಿಂದ ಲಿಂಬಾವಳಿ

(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಇಲ್ಲ

2) 17 ರಾಜ್ಯಗಳಲ್ಲಿ ಗುಟ್ಕಾ ನಿಷೇಧ ಮಾಡಲಾಗಿದೆ.

ರಾಜ್ಯದಲ್ಲಿ ಗುಟ್ಕಾ ನಿಷೇಧಿಸುವ ಕುರಿತು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿದ್ದು, ಸದರಿ ಅರ್ಜಿಯ ವಿಚಾರಣೆ ನಡೆಯುತ್ತಿದೆ. ನ್ಯಾಯಾಲಯದ ಅಂತಿಮ ತೀರ್ಪಿಗೆ ಅನುಗುಣವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

• 3) ರಾಜ್ಯದಲ್ಲಿ ಕೋಟ್ಪಾ 2003 (Cigarette and other Tobacco Products Act 2003) ಕಾಯ್ದೆಯನ್ನು ಕಟ್ಟುನಿಟ್ಟಾಗಿ ಆರೋಗ್ಯ, ಪೋಲೀಸ್ ಹಾಗೂ ಶಿಕ್ಷಣ ಇಲಾಖೆಗಳು ಅನುಷ್ಠಾನಗೊಳಿಸುತ್ತಿವೆ.